ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಕೃಷಿ ವಿಸ್ತರಣೆ ಯೋಜನೆಯ ಅಡಿಯಲ್ಲಿ ವಿಶ್ವ ಬ್ಯಾಂಕಿನಿಂದ ೧೧.೦೪೦೫೪೪.೦೦ ರೂಗಳ ನೆರವನ್ನು ಈ ಕೆಳಗೆ ನಮೂದಿಸಿರುವ ಬಾಬ್ತುಗಳಿಗೆ ಪಡೆಯಲಾಗಿದೆ.

ನಂ.	ಬಾಬ್ತುಗಳು	ಆರ್ಥಿಕ ನೆರವು (ರೂ.ಗಳಲ್ಲಿ)
೧)	ಸಿಬ್ಬಂದಿ ವೇತನ	೫,೭೯,೪೪೫.೦೦
೨)	ಉಪಕರಣಗಳು	೧,೩೪.೯೨೮೩.೦೦
೩)	ಸಿವಿಲ್ ಕಾಮಗಾರಿಗಳು	೩,೮೯,೬೮೦೦ ೦೦
		೧೧,೦೪೦೫೪೪.೦೦

ಆ) ಗ್ರಾಮೀಣ ಪ್ರದೇಶದಲ್ಲಿ ಕೃಷಿ ಸಹಾಯಕರು/ಸಹಾಯಕ ಕೃಷಿ ಅಧಿಕಾರಿಗಳ ವಸತಿ ಗೃಹಗಳಿಗಾಗಿ ಒಟ್ಟು ೨೮೯.೧೭ ಲಕ್ಷ ರೂಗಳನ್ನು ಮೀಸಲಾಗಿಟ್ಟಿದ್ದು, ೫೫೧.೦೦ ಲಕ್ಷ ರೂ.ಗಳನ್ನು ವಿರ್ಚು ಮಾಡಲಾಗಿದೆ.

ಹುಕ್ಕೇರಿ ತಾಲ್ಲೂಕಿನಲ್ಲಿ ಕೆರೆಗಳ ನಿರ್ಮಾಣ

೧೬೦. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ) ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಕೆರೆಗಳ ಸಂಖ್ಯೆಯೆಷ್ಟು ?

ಆ) ಬೋರಗಲ್, ರಾಸಿಂಗ್, ಸಿಡಲಗೊಂಡ ಕೆರೆಗಳ ನಿರ್ಮಾಣದ ಕೆಲಸವು ವಿಳಂಬವಾಗಲು ಕಾರಣವೇನು ?

ಇ) ಮಂಜೂರಾಗಿರುವ ಕೆರೆಗಳ ಕಾಮಗಾರಿಯನ್ನು ಪೂರ್ತಿ ಮಾಡಲು ನಿಗದಿಪಡಿಸಿರುವ ಅವಧಿ ಯಾವುದು ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೫.

ಆ) ಬೋರಗಲ್ ಮತ್ತು ರಾಸಿಂಗ್ ಕೆರೆಗಳ ಅಂದಾಜು ಮಂಜೂರು ಆಗಿಲ್ಲ. ಸಿಡಲಗೊಂಡ ಕೆರೆಯು ಈ ವರ್ಷದ ಯಾವುದೇ ಯೋಜನೆಯಲ್ಲಿ ಸೇರಿಲ್ಲ.

ಇ) ೩ ವರ್ಷಗಳು.

Construction of Bridge across Cauvery river between Hemmige and Talakadu in Mysore District

187. SRI. VEDANTHA HEMMIGE (Krishna raj) Will the Minister for Public Works Cada and Irrigation be pleased to state.

1) what is the amount sanctioned for construction of bridge across river Cauvery between Hemmige and Talakadu in Mysore District ;

2) What is the expenditure incurred on this bridge work so for?

3) how many years are still reqtired to complete this work ?

SRI. H. D. DEVA GOWDE (Minister for Public Works Cada and Irrigation) —

1) Rs. 70 lakhs (Rupees seventy lakhs only).

2) Rs. 18-23 lakhs (up to end of December 1987).

3) As per the agreement accepted for this work, this work is to be completed by March 1989.

ಬೈಂದೂರ್ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

ಶ್ರೀ. ಶ್ರೀ ಜಿ. ಎಸ್. ಆಚಾರ್ (ಬೈಂದೂರ್) —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಿಂದ ಬೈಂದೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ರಚಿಸಲು ಈ ಹಿಂದೆ ಆಶ್ವಾಸನೆ ನೀಡಲಾಗಿದ್ದರೂ ಆಯವ್ಯಯ ಪಟ್ಟಿಯಲ್ಲಿ ಹಣ ವಿನಿಯೋಗಿಸಿದ್ದರೂ ಕಾಮಗಾರಿ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಇ) ಪ್ರಾರಂಭಿಕ ಹಂತದ ಕಟ್ಟಡ ರಚನೆಗೆ ಅಂದಾಜು ಪಟ್ಟಿ ತಯಾರಿಸುವ ಮೊತ್ತ ಎಷ್ಟು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಈಗ ಅಸ್ತಿತ್ವದಲ್ಲಿರುವ ಸರ್ಕಾರಿ ಮಿತವ್ಯಯ ಆದೇಶ ಹಿಂತೆಗೆದುಕೊಂಡ ನಂತರ ಹಾಗೂ ಮುಖ್ಯ ಅಭಿಯಂತರರಿಂದ ನಕ್ಷೆ ಮತ್ತು ಅಂದಾಜಿನ ಪಟ್ಟಿಗೆ ಆಡಳಿತ ಆನಂಮೋದನೆ ನೀಡಿ ಸಂಬಂಧಿಸಿದ ಅಧಿಕಾರಿಗಳಿಗೆ ಸದರಿ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮ ಜರುಗಿಸಲು ಆದೇಶ ನೀಡಲಾಗುವುದು.

ಇ) ಬೆಂಗಳೂರು ದಕ್ಷಿಣ ಸಂಪರ್ಕ ಮತ್ತು ಕಟ್ಟಡಗಳ ಮುಖ್ಯ ಅಭಿಯಂತರರನ್ನು ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಕೂಡಲೇ ಕಳುಹಿಸಲು ಕೋರಲಾಗಿದೆ.

ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣ

ಶ್ರೀ. ಶ್ರೀ ಡಿ.ಹೆಚ್.ಶಂಕರಮೂರ್ತಿ (ರಾಣೆ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದನಂತರ ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯವನ್ನು ನಗರ ಪ್ರದೇಶದಲ್ಲಿ ಕೂಡಾ ಜಿಲ್ಲಾ ಪರಿಷತ್ತುಗಳೇ ನಿರ್ವಹಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ನಗರ ಪ್ರದೇಶದಲ್ಲಿ ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ದುರಸ್ತಿಗೆ ವಿಶೇಷ ಅನುದಾನವನ್ನೇನಾದರೂ ಬಿಡುಗಡೆ ಮಾಡಲು ಸರ್ಕಾರವು ಯೋಜಿಸಿದ್ದೆಯೇ ?

ಇ) ಹಾಗಿದ್ದಲ್ಲಿ ಸದರಿ ಕಾರ್ಯಕ್ಕೆ ಈ ವರ್ಷ ಬಿಡುಗಡೆ ಮಾಡಿದ ಅನುದಾನವೆಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಬಿ ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ. ಬೆಂಗಳೂರು ನಗರ ಜಿಲ್ಲಾ ಪರಿಷತ್ತು ಅಸ್ತಿತ್ವದಲ್ಲಿರುವುದಿಲ್ಲ. ಆದುದರಿಂದ ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ವಹಿಸುತ್ತಿದೆ.